# ನಾನೊಬ್ಬ ಶಿಕ್ಷಕಿ, ವಿದ್ಯಾರ್ಥಿಯೂ ಕೂಡ!

**ಲುಬ್ನಾ ಅಹಮದ್**



“ನಾವೆಲ್ಲರೂ..... ಎಲ್ಲ ಉತ್ತಮ ಶಿಕ್ಷಕರು ಹಿಂದೊಮ್ಮೆ ಉತ್ತಮ ವಿದ್ಯಾರ್ಥಿಗಳೇ ಆಗಿದ್ದವರು.... ಅವರೆಲ್ಲ ಯಾವಾಗಲೂ ವಿದ್ಯಾರ್ಥಿಗಳನ್ನು ನಿಭಾಯಿಸಲು ಹೊಸದಾರಿಗಳನ್ನು, ಹೊಸ ವಿಷಯಗಳನ್ನು ಕಲಿಯುವ ಆಸಕ್ತಿ ಹೊಂದಿರುವವರು. ಇದೇ ಅವರನ್ನು ತುದಿಗಾಲಲ್ಲಿ ನಿಲ್ಲುವಂತೆ ಮಾಡುತ್ತದೆ ಮತ್ತು ಅವರ ವೃತ್ತಿಯನ್ನು ಆಸಕ್ತಿದಾಯಕವನ್ನಾಗಿಸುತ್ತದೆ.”

ನಟರು, ನಿರ್ವಾಹಕರು, ನಿರ್ದೇಶಕರು, ಮಾರ್ಗದರ್ಶಕರು, ಆಪ್ತಸಮಾಲೋಚಕರು, ಸುಗಮಕಾರರು, ಆದರ್ಶಪ್ರಾಯರು, ಗುರು, ಬಹು-ಕಾರ್ಯನಿರ್ವಾಹಕರು, ಜೀವನ-ದರ್ಶಕರು, ಮಧ್ಯಸ್ಥಗಾರರು, ವ್ಯವಸ್ಥಾಪಕರು, ನಾಯಕರು, ಸಂಕಟನಿವಾರಕರು, ಸಂವಹನಕೌಶಲ ಹೊಂದಿರುವವರು, ಮನವರಿಕೆ ಮಾಡುವ ಕೌಶಲ ಉಳ್ಳವರು, ವಾಗ್ಮಿ... ಹೀಗೆ ಅನೇಕ ಕೌಶಲಗಳನ್ನು ಹೊಂದಿರುವವರು ಯಾರಾದರೂ ಇದ್ದರೆ ಅವರು ಶಿಕ್ಷಕರು.

## ಅನೇಕ ಪಾತ್ರಗಳು-ಒಬ್ಬ ವ್ಯಕ್ತಿ-ಎಲ್ಲ ಒಬ್ಬರಲ್ಲಿ ಸಮ್ಮಿಳಿತ

ಈ ಪಾತ್ರಗಳನ್ನೆಲ್ಲ ಒಬ್ಬರೇ ನಿರ್ವಹಿಸಬೇಕು ಎಂದು ನಿರೀಕ್ಷಿಸಲಾಗುವುದಿದ್ದರೆ ಅದು ಶಾಲಾ ಶಿಕ್ಷಕರಲ್ಲಿ ಮಾತ್ರ. ಅಂದರೆ ಇಂದು ಶಿಕ್ಷಕರಾದವರು ಎಷ್ಟು ಸವಾಲುಗಳನ್ನು ಎದುರಿಸುತ್ತಿದ್ದಾರೆ ಎಂಬುದಕ್ಕೆ ಇದು ಸಾಕ್ಷಿ. ಇವೆಲ್ಲ ಪಾತ್ರಗಳು ಅಂತಿಮವಾಗಿ ಬೋಧನೆ-ಕಲಿಕಾ ಅನುಭವದಲ್ಲಿ ಸಮ್ಮಿಲನಗೊಳ್ಳಬೇಕು ಎಂಬುದೇ ಶಿಕ್ಷಕರ ಪಾಲಿನ ಬಹುದೊಡ್ಡ ಸವಾಲು.

ಇವೆಲ್ಲವನ್ನೂ ಹೇಳುವುದು ಬರೆಯುವುದು ಸುಲಭ. ಆದರೆ ಅವೆಲ್ಲವನ್ನೂ ಜಾರಿಗೆ ತರುವುದು ಕಷ್ಟದ ಕೆಲಸ.

ಹತ್ತು ವರ್ಷಗಳ ಕಾಲ ಶಾಲಾ ಶಿಕ್ಷಕಿಯಾಗಿ ನಾನು ಸಾಗಿ ಬಂದ ಪಯಣವನ್ನು ಮತ್ತೆ ನೆನಪು ಮಾಡಿಕೊಂಡು ಅಲ್ಲಿ ದಕ್ಕಿಸಿಕೊಂಡ ಅನುಭವಗಳನ್ನು ಮತ್ತು ಒಳನೋಟಗಳನ್ನು ಬರಹರೂಪದಲ್ಲಿ ಪ್ರಸ್ತುತಪಡಿಸುವ ಪ್ರಯತ್ನವನ್ನು ಮಾಡಿದ್ದೇನೆ. ಅಲ್ಲಿ ದಕ್ಕಿದ ಅನುಭವಗಳು ನನ್ನ ವ್ಯಕ್ತಿತ್ವವನ್ನು ರೂಪಿಸುವಲ್ಲಿ ಹಾಗೂ ವೃತ್ತಿಪರವಾಗಿ ಬೆಳೆಯಲು ನೆರವಾಯಿತು ಎಂಬುದರಲ್ಲಿ ಯಾವುದೇ ಅನುಮಾನವಿಲ್ಲ. ಈ ಲೇಖನದಲ್ಲಿ ನಾನು ವಿಶೇಷವಾಗಿ, ತರಗತಿಯೊಳಗೆ ಪಡೆದ ಅನುಭವಗಳನ್ನು ಪ್ರಸ್ತಾವ ಮಾಡಿದ್ದೇನೆ.

## ನಿರೀಕ್ಷೆಗಳು

ಒಬ್ಬ ಶಿಕ್ಷಕಿ ರಂಗಭೂಮಿಯ ನಟಿಯಂತೆ. ಆಕೆಗೆ ವಿದ್ಯಾರ್ಥಿಗಳ ಗಮನವನ್ನು ಸೆಳೆಯುವಂತಹ ಸ್ಪಷ್ಟ ಹಾಗೂ ಗಟ್ಟಿಯಾದ ಧ್ವನಿ ಇರಬೇಕು. ತರಗತಿಯಲ್ಲಿಯ ಆಕೆಯ ನಿರ್ವಹಣೆ ಹೇಗಿರಬೇಕೆಂದರೆ, ವಿದ್ಯಾರ್ಥಿಗಳು ಆಕೆ ಹೇಳುವ ವಿಷಯವನ್ನು ತದೇಕ ಚಿತ್ತದಿಂದ ಆಲಿಸುವಂತಿರಬೇಕು. ಕಲಿಕಾ ಪ್ರಕ್ರಿಯೆಯಲ್ಲಿ ಆಕೆ ವಿದ್ಯರ್ಥಿಗಳಿಗೆ ನಿರ್ದೇಶನವನ್ನು ಕೂಡ ನೀಡುವಂತಿರಬೇಕು ಮತ್ತು ಮಕ್ಕಳಿಂದ ಕೆಲಸವನ್ನು ಮಾಡಿಸುವಂತಿರಬೇಕು. ತರಗತಿಯನ್ನು ನಡೆಸಲು ಶಿಕ್ಷಕಿಗೆ ನೀಡಿದ ಅರ್ಧಘಂಟೆ ಅಥವಾ ನಲವತ್ತು ನಿಮಿಷಗಳ ಕಾಲಾವಕಾಶದಲ್ಲಿ ಆ ದಿನಕ್ಕೆ ನಿಗದಿಪಡಿಸಲಾದ ಉದ್ದೇಶವನ್ನು ಪೂರೈಸಬೇಕು ಮತ್ತು ವಿದ್ಯಾರ್ಥಿಗಳು ವಿಷಯವನ್ನು ಅರಗಿಸಿಕೊಳ್ಳುವಂತಿರಬೇಕು. ಜೊತೆಗೆ ಉತ್ತಮ ಮೌಲ್ಯಗಳನ್ನು ಕರಗತ ಮಾಡಿಕೊಳ್ಳುವಂತಿರಬೇಕು.

ಶಿಕ್ಷಕರ ಪ್ರತಿಯೊಂದು ನಡೆ-ನುಡಿಗಳನ್ನು ವಿದ್ಯಾರ್ಥಿಗಳು ವೀಕ್ಷಿಸುತ್ತ, ಅವಲೋಕಿಸುತ್ತ ಇರುತ್ತಾರೆ. ಒಬ್ಬ ಶಿಕ್ಷಕಿಯ ವ್ಯಕ್ತಿತ್ವ, ಆಕೆಯ ಉಡುಗೆ-ತೊಡುಗೆಗಳು ಮತ್ತು ಎಲ್ಲಕ್ಕಿಂತ ಮುಖ್ಯವಾಗಿ ಆಕೆಯ ತಾಳ್ಮೆಯ ಮಟ್ಟವನ್ನು ವಿದ್ಯಾರ್ಥಿಗಳು ಪರೀಕ್ಷಿಸುತ್ತಿರುತ್ತಾರೆ. ಇವೆಲ್ಲವೂ ಒಂದೇ ದಿನಕ್ಕೆ ಮುಗಿದುಹೋಗುವಂತಹುದಲ್ಲ. ಶಿಕ್ಷಕರು ಈ ವಿಚಾರದಲ್ಲಿ ಪ್ರತಿದಿನವೂ ವಿದ್ಯಾರ್ಥಿಗಳ ಕಣ್ಣಲ್ಲಿ ಅಳೆಯಲ್ಪಡುತ್ತಾರೆ.

ಹಾಗೇ ಇಲ್ಲಿರುವ ಶಿಕ್ಷಕ ವಿದ್ಯಾರ್ಥಿಗಳ ಅನುಪಾತವನ್ನು ಯಾರೂ ಮರೆಯಬಾರದು. ಅದು ಒಂದಕ್ಕೆ ನಲವತ್ತು ಅಥವಾ ಐವತ್ತು ಆಗಿರಬಹುದು. ಕೆಲವೊಮ್ಮೆ ಅದು ಒಂದಕ್ಕೆ ಅರವತ್ತಾಗುವ ಸಾಧ್ಯತೆಯೂ ಇರುತ್ತದೆ. ಈ ಅನುಪಾತದಲ್ಲಿ ಒಂದು ಎನ್ನುವುದು ಶಿಕ್ಷಕಿ, ಅರುವತ್ತು ಎನ್ನುವುದು ವಿದ್ಯಾರ್ಥಿಗಳು! ಒಂದು ವೇಳೆ ನೀವು ಪ್ರತಿನಿಧಿಸುವ ತರಗತಿ ಹತ್ತು, ಹನ್ನೊಂದು ಅಥವಾ 12ನೇ ತರಗತಿ ಆಗಿದ್ದರೆ, ವಿದ್ಯಾರ್ಥಿಗಳು ನಿಮಗಿಂತಲೂ ಎತ್ತರವಿರಬಹುದು (ಬಲಿಷ್ಠರು ಕೂಡ). ಇಂತಹ ತರಗತಿಗಳನ್ನು ನಿಭಾಯಿಸಲು ನಾಯಕತ್ವ ಕೌಶಲದ ಜೊತೆಗೆ ಉನ್ನತಮಟ್ಟದ ಪ್ರಬುದ್ಧತೆ ಬೇಕು. ಇಂತಹ ತರಗತಿಗಳಲ್ಲಿ ಕೂಗಾಡುವುದು, ಬೈಯ್ಯುವುದು ಮತ್ತು ಭಾವುಕರಾಗುವುದರಿಂದ ಪರಿಸ್ಥಿತಿ ಇನ್ನಷ್ಟು ಕೆಟ್ಟುಹೋಗುವ ಸಾಧ್ಯತೆ ಇರುತ್ತದೆ. ನಿಜಕ್ಕೂ ಬಹು ಕಠಿಣ ಪರಿಸ್ಥಿತಿ.

ಕಳೆದ ಹತ್ತು ವರ್ಷಗಳಿಂದ ನಾನು ಈ ವೃತ್ತಿಯಲ್ಲಿದ್ದೇನೆ, ಇನ್ನೂ ನಾನು ‘ಪರಿಪೂರ್ಣತೆ’ಯಿಂದ ಸಾಕಷ್ಟು ದೂರವೇ ಇದ್ದೇನೆ. ನಾನು ಈಗಲೂ ಕಲಿಯುತ್ತಿದ್ದೇನೆ ಮತ್ತು ಉತ್ತಮ ಶಿಕ್ಷಕಿಯಾಗಲು ನನ್ನ ಕೌಶಲಗಳನ್ನು ನಿಕಷಕ್ಕೆ ಒಡ್ಡಿಕೊಳ್ಳುತ್ತಲೇ ಇದ್ದೇನೆ. ಪ್ರತಿವರ್ಷ, ಪ್ರತಿತಿಂಗಳು, ಪ್ರತಿದಿನ ಮತ್ತು ವಿದ್ಯಾರ್ಥಿಗಳಿಗೆ ಬಹುಮುಖ್ಯ ವಿಷಯವನ್ನು ಬೋಧನೆ ಮಾಡುವ ಸಂದರ್ಭದಲ್ಲಿ ಕಲಿಯುತ್ತಲೇ ಇರುತ್ತೇನೆ. ಅವರೊಂದಿಗೆ ಚರ್ಚೆ ನಡೆಸುತ್ತ ವಿದ್ಯಾರ್ಥಿಗಳ ಜೊತೆಗೆ ಹೊಸ ವಿಷಯವನ್ನು ನಿಭಾಯಿಸುವ ಕಲೆಯನ್ನು ಕಲಿತುಕೊಳ್ಳುತ್ತೇನೆ ಮತ್ತು ಬೋಧನೆ-ಕಲಿಕೆ ಪ್ರಕ್ರಿಯೆಯನ್ನು ಮೇಲ್-ಸ್ತರಕ್ಕೆ ಏರಿಸಲು ಪ್ರಯತ್ನ ಮಾಡುತ್ತಿರುತ್ತೇನೆ.

## ಅನುಭವಗಳು ಮತ್ತು ಸವಾಲುಗಳಿಂದ ನಾನು ಕಲಿತ ಪಾಠಗಳು

ನನ್ನ ಕೆಲವು ಅನುಭವಗಳನ್ನು ಇಲ್ಲಿ ಹಂಚಿಕೊಳ್ಳುತ್ತಿದ್ದೇನೆ. ಕಳೆದ ಹತ್ತು ವರ್ಷಗಳ ಅವಧಿಯಲ್ಲಿ ನಾನು ಎದುರಿಸಿದ ಸವಾಲುಗಳು ಅಥವಾ ಕೆಲವು ಪ್ರಮುಖ ಘಟನೆಗಳು, ತರಗತಿಯಲ್ಲಿನ ನನ್ನ

ನಿರ್ವಹಣೆ, ವಿದ್ಯಾರ್ಥಿ–ಕಲಿಕಾರ್ಥಿಗಳ ಬಗೆಗಿನ ನಡವಳಿಕೆ ವಿಚಾರದಲ್ಲಿ ನನ್ನನ್ನು ರೂಪಿಸುವಲ್ಲಿ ಮಹತ್ತ್ವದ ಪಾತ್ರವನ್ನು ವಹಿಸಿವೆ ಮತ್ತು ನಾನು ಬದಲಾವಣೆಯನ್ನು ಹೊಂದಲು ಹಾಗೂ ವಿಕಸನಗೊಳ್ಳಲು ಅವಕಾಶವನ್ನು ನೀಡಿವೆ.

ಆ ದಿನ ನಾನು ತ್ರಿಕೋನಮಿತಿ(trigonometry)ಯನ್ನು ಪಾಠ ಮಾಡಲು ತರಗತಿಯೊಳಗೆ ಕಾಲಿಟ್ಟೆ. ವಿದ್ಯಾರ್ಥಿಗಳ್ಯಾರೂ ಕಲಿಯುವ ಒಳ್ಳೆಯ ಮೂಡ್‌ನಲ್ಲಿ ಇಲ್ಲದೇ ಇರುವುದು ಕಾಣಿಸಿತು. ಒಬ್ಬ ಅದೇನೋ ಹೇಳಿದ, ಪ್ರತಿಯೊಬ್ಬರೂ ಅದನ್ನು ಕೇಳಿ ನಗತೊಡಗಿದರು. "ಶಿಕ್ಷಕರಿಗೆ ಗೌರವ ಕೊಡುವುದನ್ನು ಕಲಿಯಿರಿ ಮೊದಲು" ಎಂದು ಮಕ್ಕಳನ್ನು ಗದರಿಸಿ ಉಪದೇಶ ಮಾಡುವುದರ ಬದಲಾಗಿ ಅವರ ನಡವಳಿಕೆಯನ್ನು ನಿರ್ಲಕ್ಷಿಸಿ ತರಗತಿ ಆರಂಭಿಸಲು ನಿರ್ಧರಿಸಿದೆ. ಆಗ ನಾನು ವಿಷಯವನ್ನು ಕೊಂಚ ವಿಭಿನ್ನವಾಗಿ ಶುರುಮಾಡಿದೆ. ಇದರ ಹಿಂದೆ ಎರಡು ಉದ್ದೇಶವಿತ್ತು; ಒಂದು ಮಕ್ಕಳ ಗಮನವನ್ನು ಬೇರೆಡೆ ಸೆಳೆಯುವುದು ಮತ್ತು ಅವರನ್ನು ಕಲಿಕೆಯ ಹಾದಿಗೆ ತರುವುದು. ಆ ಕ್ಷಣದಲ್ಲಿ ನಾನು ಅವರಿಗೊಂದು ಪ್ರಶ್ನೆಯನ್ನು ಕೇಳಿದೆ. ಶಾಲಾ ಕಟ್ಟಡವನ್ನು ಮುಟ್ಟದೆ ಅಥವಾ ಹತ್ತಿರಕ್ಕೂ ಹೋಗದೆ ಅದರ ಎತ್ತರವನ್ನು ಕಂಡುಹಿಡಿಯಲು ಸಾಧ್ಯವೇ? ಈ ಪ್ರಶ್ನೆ ಅವರನ್ನು ಯೋಚಿಸುವಂತೆ ಮಾಡಿತು ಮತ್ತು ಅದರ ಬಗ್ಗೆ ಚಿಂತಿಸಲು ಕಾಲಾವಕಾಶವನ್ನು ಕೊಟ್ಟೆ. ಸ್ವಲ್ಪ ಹೊತ್ತಾದ ಮೇಲೆ ಹೇಳಿದೆ; ನಾವೀಗ ಕಲಿಯಲಿರುವ ವಿಷಯ ಅದನ್ನು ನಿಖರವಾಗಿ ಅಳತೆ ಮಾಡುವುದನ್ನು ಕಲಿಸುತ್ತದೆ ಎಂದು. ಇದು ಅವರ ಗಮನವನ್ನು ಸೆಳೆಯಿತು ಮತ್ತು ನಾನು ನನ್ನ ತರಗತಿಯನ್ನು ಮುಂದುವರಿಸಲೂ ಸಾಧ್ಯವಾಯಿತು.

**ನಾನು ಕಲಿತದ್ದು:** ಋಣಾತ್ಮಕ ಸ್ಥಿತಿಯಿಂದ ಧನಾತ್ಮಕ ಸ್ಥಿತಿಯ ಕಡೆಗೆ ಗಮನವನ್ನು ಸೆಳೆಯುವುದು.

ಒಂದು ದಿನ ತರಗತಿಯಲ್ಲಿ ವಿದ್ಯಾರ್ಥಿಯೊಬ್ಬ ಆಕಳಿಸುತ್ತಿರುವುದು ಕಾಣಿಸಿತು. (ದಿನದ ಕೊನೆಯ ಎರಡು ಪಿರಿಯಡ್‌ಗಳಲ್ಲಿ ಇದು ಸಾಮಾನ್ಯ). ಅದಾದ ಬಳಿಕ ಇನ್ನೊಬ್ಬ ಆಕಳಿಸಿದ, ಅದರ ಅನಂತರ ಇನ್ನೊಬ್ಬ... ಹೀಗೆ ಸರಣಿಯಲ್ಲಿ ಮುಂದುವರಿಯಿತು. ಇದಕ್ಕೆಲ್ಲ ನನ್ನ ಪಾಠವೇ ಕಾರಣ ಎಂಬುದು ಕೂಡಲೇ ನನಗೆ ಅರಿವಾಯಿತು. ನಾನೂ ಕೂಡ ಕಳೆದ 10–12 ನಿಮಿಷಗಳಿಂದ ನಿರಂತರವಾಗಿ ಮಾತನಾಡುತ್ತಲೇ ಇದ್ದೇನೆ. ಇದರಿಂದ ಹೆಚ್ಚಿನ ಮಕ್ಕಳು ಏಕಾಗ್ರತೆಯನ್ನು ಕಳೆದುಕೊಳ್ಳುವ ಸಾಧ್ಯತೆ ಇರುತ್ತದೆ. ಹಾಗಾಗಿ ತತ್‌ಕ್ಷಣ ನಾನು ಮಾತು ನಿಲ್ಲಿಸಿದೆ. ಕೆಲಕಾಲ ಸಂಪೂರ್ಣವಾಗಿ ಮೌನವಹಿಸಿದೆ. ಈ ಮೌನವನ್ನು ವಿದ್ಯಾರ್ಥಿಗಳು ತತ್‌ಕ್ಷಣ ಗಮನಿಸಿದರು. ನಾನು ಅವರ ಗಮನವನ್ನು ಪಾಠದ ಕಡೆಗೆ ಸೆಳೆದೆ. ಈಗ ವಿದ್ಯಾರ್ಥಿಗಳಿಗೆ ಪ್ರಶ್ನೆ ಕೇಳುವ ಮೂಲಕ ಪಾಠ ಮುಂದುವರಿಸಿದೆ. ಇದು ಅವರಿಗೆ ಪಾಠದಲ್ಲಿ, ತರಗತಿಯಲ್ಲಿ ತೊಡಗಿಕೊಳ್ಳಲು ಉತ್ತೇಜನ ನೀಡಿದಂತಾಯಿತು ಮತ್ತು ತೀರ್ಮಾನಕ್ಕೆ ಬರುವಂತಾಯಿತು. ಕೆಲವು ಸುಳಿವುಗಳ ರೂಪದಲ್ಲಿ ಪ್ರಮುಖ ಪದಗಳನ್ನು ನೀಡಿ ಅವರು ಆ ಪ್ರಶ್ನೆಗಳಿಗೆ ಉತ್ತರ ನೀಡುವಂತೆ ಮಾಡಿದೆ. ಅವರ ಉತ್ತರಗಳು ಸರಿಯಾದಾಗ ಅವರನ್ನು ಶ್ಲಾಘಿಸಿದೆ. ಇದರಿಂದಾಗಿ ವಿದ್ಯಾರ್ಥಿಗಳಿಗೆ ಪ್ರೇರಣೆ ನೀಡಿದಂತಾಯಿತು ಮತ್ತು ಕಲಿಕಾ ಉದ್ದೇಶಗಳನ್ನು ಪೂರೈಸಲೂ ಸಾಧ್ಯವಾಯಿತು.

**ನಾನು ಕಲಿತದ್ದು:** ಕಲಿಕಾ ಪ್ರಕ್ರಿಯೆಯಲ್ಲಿ ವಿದ್ಯಾರ್ಥಿಗಳನ್ನು ತೊಡಗಿಸಿಕೊಳ್ಳುವಂತೆ ಮಾಡುವುದರಿಂದ ಏಕತಾನತೆಯನ್ನು ಮುರಿದುಬೋಧನೆ–ಕಲಿಕಾ ಪ್ರಕ್ರಿಯೆ ಪರಿಣಾಮಕಾರಿಯಾಗಿ ಮಾಡಲು ಸಾಧ್ಯವಿದೆ.

ಪ್ರತಿಯೊಬ್ಬ ಕಲಿಕಾರ್ಥಿ ಅಥವಾ ವಿದ್ಯಾರ್ಥಿ ತನ್ನದೇ ಆದ ಗತಿಯಲ್ಲಿ ಕಲಿಯುತ್ತಿರುತ್ತಾನೆ/ಳೆ. ನಾವಾದರೋ ಬಹುವಿಧದ ವಿದ್ಯಾರ್ಥಿಗಳಿಗೆ ಬೋಧನೆ ಮಾಡುತ್ತಿರುತ್ತೇವೆ. ಒಂದು ಪರಿಕಲ್ಪನೆಯನ್ನು ಪರಿಚಯ ಮಾಡಿಸುವ ನನ್ನ ಪಾಠ ಯಾವತ್ತೂ ಸರಳತೆಯಿಂದ ಸಂಕೀರ್ಣತೆಯತ್ತ ಹರಿಯುತ್ತದೆ. ಉದಾಹರಣೆಗೆ ಒಂಬತ್ತನೆಯ ತರಗತಿಗೆ ಬೀಜಗಣಿತವನ್ನು ಪಾಠ ಮಾಡುವ ಸಂದರ್ಭದಲ್ಲಿ ನಾನು ಹಿಂದಿನ ಅಂದರೆ ಆರು, ಏಳು ಮತ್ತು ಎಂಟನೆಯ ತರಗತಿಗಳಲ್ಲಿ ಮಾಡಿದ ಪರಿಕಲ್ಪನೆಗಳನ್ನು ಪುನರಾವರ್ತನೆ ಮತ್ತು ಪುನರಾವಲೋಕನ ಮಾಡುತ್ತೇನೆ. ಇದರಿಂದ ವಿದ್ಯಾರ್ಥಿಗಳು ವಿಷಯಕ್ಕೆ ಹೆಚ್ಚು ಹತ್ತಿರವಾಗಲು ಮತ್ತು ವಿಷಯವನ್ನು ಚೆನ್ನಾಗಿ ಅರ್ಥಮಾಡಿಕೊಳ್ಳಲು ಸಾಧ್ಯವಾಗುತ್ತದೆ. ಇದರ ಜೊತೆಗೆ ಕಂಪ್ಯೂಟರ್ ಮತ್ತು ಸಿದ್ಧಪಡಿಸಿರುವ ಮಾದರಿಗಳಾದ ಮಲ್ಟಿಮೀಡಿಯಾ ಸಾಧನಗಳನ್ನು ಬಳಸುವುದರಿಂದ ಅವರ ಕಲಿಕೆ ಇನ್ನಷ್ಟು ಸುಧಾರಿಸಲು ಸಾಧ್ಯ.

**ನಾನು ಕಲಿತದ್ದು:** ಪಾಠ ಮಾಡುವ ತರಗತಿಯಲ್ಲಿ ನಾನಾ ರೀತಿಯ ವಿದ್ಯಾರ್ಥಿಗಳಿರುತ್ತಾರೆ ಎಂಬುದನ್ನು ಮನಸ್ಸಿನಲ್ಲಿಟ್ಟುಕೊಂಡು ಅದಕ್ಕೆ ತಕ್ಕಂತೆ ನಿಮ್ಮ ಬೋಧನಾ ವಿಧಾನವನ್ನು ಅಳವಡಿಸಿಕೊಳ್ಳಬೇಕು.

ಕೆಲವರ್ಷಗಳ ಹಿಂದೆ ನಾನು ನನ್ನ ಕ್ಲಾಸ್ ಬಗ್ಗೆ ವಿದ್ಯಾರ್ಥಿಗಳ ಅಭಿಪ್ರಾಯಗಳನ್ನು ಸಂಗ್ರಹಿಸಿದೆ. ಶಿಕ್ಷಕರ ಬಗ್ಗೆ ಇಷ್ಟಪಟ್ಟ ಮತ್ತು ಇಷ್ಟಪಡದೇ ಇರುವ ಎರಡು ಸಂಗತಿಗಳನ್ನು ತಿಳಿಸುವಂತೆ ಅವರನ್ನು ಕೇಳಿದೆ. ಅನೇಕ ಉತ್ತರಗಳು ನಿರೀಕ್ಷಿತವೇ ಆಗಿದ್ದವು. ಆದರೆ ಅನೇಕ ವಿದ್ಯಾರ್ಥಿಗಳು "ಶಿಕ್ಷಕರು ಯಾವಾಗಲೂ ಸಿಟ್ಟು ಮಾಡಿಕೊಂಡು ನಮ್ಮ ಮೇಲೆ ಕೂಗಾಡುತ್ತಾರೆ" ಎಂದು ಬರೆದಿದ್ದು ನೋಡಿ ಅಚ್ಚರಿ ಎನಿಸಿತು. ಆ ಶಿಕ್ಷಕರು ತುಂಬ ಚೆನ್ನಾಗಿ ಪಾಠ ಮಾಡುತ್ತಾರೆ, ಆದರೆ ಅವರು ಆಗಾಗ ಕೋಪ ಮಾಡಿಕೊಳ್ಳುತ್ತಾರೆ ಎಂದೂ ಬರೆದಿದ್ದರು. ಅವರು ನನ್ನ ಬಗ್ಗೆಯೇ ಹೇಳುತ್ತಿದ್ದಾರೆ ಎಂದು ಊಹಿಸಿದೆ. ಇದು ನನಗೆ ನಿಜಕ್ಕೂ ಚಿಂತೆಗೆ ಕಾರಣವಾಗಿತ್ತು. ಯಾಕೆಂದರೆ ಮಕ್ಕಳಿಗೆ ಇದು ತೀವ್ರವಾಗಿ ಅನ್ನಿಸಿದ್ದರಿಂದಲೇ ಬರೆದಿದ್ದಾರೆ ಅನಿಸಿತು. ನಾನು ನನ್ನ ಭಾವನೆಗಳನ್ನು ನಿಯಂತ್ರಣದಲ್ಲಿ ಇಟ್ಟುಕೊಳ್ಳಬೇಕು, ಅದು ವಿದ್ಯಾರ್ಥಿಗಳ ಮೇಲೆ ಪರಿಣಾಮ ಬೀರುತ್ತಿದೆ ಎಂಬುದು ನನಗೆ ಅರಿವಾಯಿತು.

**ನಾನು ಕಲಿತದ್ದು:** ಶಿಕ್ಷಕಿ ಗದರುವುದರಿಂದ, ಕೋಪ ಮಾಡಿಕೊಳ್ಳುವುದರಿಂದ ಮಕ್ಕಳ ಕಲಿಕೆಗೆ ಭಂಗವುಂಟಾಗುತ್ತದೆ. ಶಿಕ್ಷಕರು ಯಾವತ್ತೂ ವಿದ್ಯಾರ್ಥಿಗಳಿಗೆ 'ಖುಷಿ'ಯ ವಾತಾವರಣವನ್ನು ಒದಗಿಸಲು ಪ್ರಯತ್ನ ಮಾಡಬೇಕು.

ಒಂದು ದಿನ ಸಿಬ್ಬಂದಿ ಸಭೆ ನಡೆಯುತ್ತಿತ್ತು. 'ನಿಮಗೆ ಒಪ್ಪಿಸಿದ್ದ ಕಾರ್ಯವನ್ನು ಪೂರ್ಣಗೊಳಿಸಿದ್ದೀರಾ' ಎಂದು ಪ್ರಾಂಶುಪಾಲರು ನನ್ನನ್ನು ಕೇಳಿದರು. ಆದರೆ ಆ ಕೆಲಸವನ್ನು ನಾನು ಮಾಡಿರಲಿಲ್ಲ. ಎಲ್ಲ ಶಿಕ್ಷಕರ ಮುಂದೆ ಈಗ ನನಗೆ ಛೀಮಾರಿ ಹಾಕುವುದು ಖಚಿತ ಎಂದು ಭಾವಿಸಿ ಒಂದು ಕ್ಷಣ ನನಗೇ ನಾಚಿಕೆ ಅನಿಸಿತು. ಅಕ್ಷರಶಃ ನಿಂತ ನೆಲವೇ ಕುಸಿದಂತಾಯಿತು. ಆದರೆ ಅವರು ನನ್ನನ್ನೊಮ್ಮೆ ನೋಡಿ, 'ನೀವು ಇತರ ಜವಾಬ್ದಾರಿಗಳಲ್ಲಿ ತೊಡಗಿಸಿಕೊಂಡಿರಬಹುದು, ಅದು ನನಗೆ ಅರ್ಥವಾಗುತ್ತದೆ, ಯಾವಾಗ ಅದು ಲಭ್ಯವಾಗಬಹುದು'

ಎಂದು ಕೇಳಿದರು. ಆ ಕ್ಷಣದಲ್ಲಿ ಅವರ ನಗು ಮತ್ತು ಪ್ರೋತ್ಸಾಹಕ ನುಡಿಗಳು ಪರಿಸ್ಥಿತಿಯನ್ನು ತಿಳಿಗೊಳಿಸಿತು ಮತ್ತು ಅವರನ್ನು ಅತ್ಯಂತ ಗೌರವದಿಂದ ಕಾಣುವಂತೆ ಮಾಡಿತು. ನಾನು ಆ ಕೆಲಸವನ್ನು ಇನ್ನಷ್ಟು ಆಸಕ್ತಿ ಮತ್ತು ಉತ್ಸಾಹದಿಂದ ಮಾಡಿ ಮುಗಿಸಿದೆ ಮತ್ತು ಅದನ್ನು ಇನ್ನಷ್ಟು ಉತ್ತಮವಾಗಿಯೇ ಮಾಡಿದೆ ಅನಿಸುತ್ತದೆ.

ಹೀಗೆ ಕಲಿತ ಪಾಠವನ್ನು ನಾನು ತರಗತಿಯೊಳಗೂ ಜಾರಿಗೆ ತಂದೆ. ವಿದ್ಯಾರ್ಥಿಗಳು ಎಲ್ಲ ವಿಷಯಗಳಿಗೆ ಸಂಬಂಧಿಸಿದ ಕೆಲಸವನ್ನು ಆಯಾ ದಿನವೇ ಪೂರ್ಣಗೊಳಿಸಬೇಕು ಎಂದು ನಿರೀಕ್ಷಿಸಲಾಗುತ್ತದೆ. ಆದರೆ ಈಗ ನಾನು ಅವರ ಕೆಲಸದ ಹೊರೆಯನ್ನು ನೋಡಿಕೊಂಡು ಕಾರ್ಯನಿಯೋಜನೆಯನ್ನು ಮಾಡುತ್ತೇನೆ. ಅವರು ಲೆಕ್ಕಮಾಡುವಾಗ ತರಗತಿಯಲ್ಲಿ ಒಂದು ಸುತ್ತು ಹಾಕಿ "ಗುಡ್, ಚೆನ್ನಾಗಿ ಮಾಡಿದ್ದೀಯಾ", "ಸರಿಯಾಗಿದೆ ನೀನು ಮಾಡಿದ್ದು.... ಆದರೆ ಇದನ್ನು ಹೀಗೆ ಸರಿಮಾಡು" ಎಂದು ಪ್ರೋತ್ಸಾಹಿಸುವ ಕೆಲಸ ಮಾಡುತ್ತೇನೆ. ಅವರು ಕೇವಲ ಒಂದು ಸಾಲು ಸರಿಯಾಗಿ ಬರೆದಿದ್ದರೂ ಅಥವಾ ಅರ್ಧ ಸಾಲು ಸರಿಯಾಗಿ ಬರೆದಿದ್ದರೂ ಅವರನ್ನು ಬೆಂಬಲಿಸುತ್ತೇನೆ.

**ನಾನು ಕಲಿತದ್ದು:** ಮಕ್ಕಳಿಗೆ ಉತ್ತೇಜನ ನೀಡುವಂಥ ಶಿಕ್ಷಕರ ಒಂದು ಮುಗುಳ್ನಗು ಅಥವಾ ಅರ್ಥ ಮಾಡಿಕೊಳ್ಳುವ ಒಂದು ನೋಟ, ಶಿಕ್ಷಕರು-ವಿದ್ಯಾರ್ಥಿಗಳ ನಡುವಿನ ಸಂಬಂಧವನ್ನು ಸುಧಾರಿಸುವುದರೊಂದಿಗೆ ಉತ್ತಮ ಕಲಿಕೆಗೂ ದಾರಿ ಮಾಡಿಕೊಡುತ್ತದೆ.

ಗಣಿತದಂತಹ ವಿಷಯವನ್ನು ಉರು ಹೊಡೆಯಲು ಸಾಧ್ಯವಿಲ್ಲ. ಇದಕ್ಕೆ ಸಾಕಷ್ಟು ಅಭ್ಯಾಸ, ತರಬೇತಿ ಬೇಕಾಗುತ್ತದೆ. ಹೀಗೆ ಮಾಡುವುದರಿಂದ ಲೆಕ್ಕದ ಪರಿಕಲ್ಪನೆಗಳು ಕರಗತವಾಗುತ್ತ ಹೋಗುತ್ತವೆ. ನಾನು ತರಗತಿಯಲ್ಲಿ ಪಾಠ ಮಾಡಿದ ಅನಂತರ ವಿದ್ಯಾರ್ಥಿಗಳು ಮನೆಗೆ ಹೋಗಿ ಅದನ್ನು ಅಭ್ಯಾಸ ಮಾಡಬೇಕು ಎಂಬುದು ನನ್ನ ನಿರೀಕ್ಷೆ. ಕೆಲವು ವಿದ್ಯಾರ್ಥಿಗಳು ಇದನ್ನು ಮಾಡುತ್ತಾರೆ. ಬಹುತೇಕರು ಈ ಅಭ್ಯಾಸ ಮಾಡುವುದಿಲ್ಲ. ಹಾಗಾಗಿ ಅವರು ಇನ್ನೊಂದು ಪರಿಕಲ್ಪನೆಯನ್ನು "ಜೀರ್ಣಿಸಿಕೊಳ್ಳಲು" ಸಿದ್ಧರಾಗಿರುವುದಿಲ್ಲ. ಮಕ್ಕಳು ಹೀಗೆಯೇ ಮುಂದುವರಿದರೆ ಆ ವಿಷಯದ ಮೇಲಿನ ಹಿಡಿತವನ್ನೇ ಕಳೆದುಕೊಂಡುಬಿಡುತ್ತಾರೆ. ಅದಕ್ಕಾಗಿ ಅವರಿಗೆ ಆ ವಿಷಯವನ್ನು ಕೇವಲ 15 ನಿಮಿಷ ಅಭ್ಯಾಸ ಮಾಡಿ, ಅದಕ್ಕಿಂತ ಒಂದು ನಿಮಿಷವೂ ಹೆಚ್ಚು ಅಭ್ಯಾಸ ಮಾಡುವುದು ಬೇಡ ಎಂದು ಹೇಳುತ್ತೇನೆ. ಇದು ಅನೇಕ ಸಂದರ್ಭಗಳಲ್ಲಿ ಕೆಲಸ ಮಾಡಿದೆ ಕೂಡ.

**ನಾನು ಕಲಿತದ್ದು:** ನಾನಿನ್ನೂ ಕಲಿಯುತ್ತಿದ್ದೇನೆ. ವಿದ್ಯಾರ್ಥಿಗಳು ಕಲಿಯುವಂತೆ ಸ್ಫೂರ್ತಿ ತುಂಬಲು ನಾನಿನ್ನೂ ಸಾಕಷ್ಟು ಕಲಿಯಬೇಕಾಗಿದೆ.

## ಉಪಸಂಹಾರ

ಜಪಾನಿ ಭಾಷೆಯಲ್ಲಿ ಕೈಝೆನ್ ಎಂಬುದೊಂದು ಪದವಿದೆ. ಅದರ ಅರ್ಥ ನಿರಂತರ ಪ್ರಗತಿಗಾಗಿ ಸಣ್ಣ ಸಣ್ಣ ಬದ್ಲಿಗಳು ಎಂದು. ಇಲ್ಲಿಯವರೆಗಿನ ನನ್ನ ಪಯಣವು ಸಣ್ಣ ಸಣ್ಣ ಪಾಠಗಳ ಸರಣಿಗಳಾಗಿದೆ. ಇಂತಹ ಕಲಿಕೆಗಳು ನನಗೊಂದು ರೂಪವನ್ನು ಕೊಟ್ಟಿವೆ. ನನ್ನ ಕೌಶಲಗಳು ಹೆಚ್ಚುವಂತೆ, ನಾನು ಉತ್ತಮ ಶಿಕ್ಷಕಿಯಾಗಲು ಮತ್ತು ಎಲ್ಲಕ್ಕಿಂತ ಮುಖ್ಯವಾಗಿ ಉತ್ತಮ ಮನುಷ್ಯಳಾಗಲು ಸಹಾಯ ಮಾಡಿವೆ.

ಮತ್ತು ಶಿಕ್ಷಕಿಯಾಗಿ ನನ್ನ ಪಯಣ ಮುಂದುವರಿದಿದೆ, ಕಲಿಕೆಗೆ ಕೊನೆಯಿಲ್ಲ ಎನ್ನುತ್ತಾರಲ್ಲ ಹಾಗೆ....

---

**ಲುಬ್ನಾ ಅಹಮದ್:** ಇವರು ದಿಲ್ಲಿ ವಿಶ್ವವಿದ್ಯಾಲಯದಿಂದ ಗಣಿತದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದಿದ್ದಾರೆ. ಪದವಿಯ ಅನಂತರ ಒಂದು ಐಟಿ ಕಂಪನಿಯಲ್ಲಿ ಸುಮಾರು 12 ವರ್ಷ ಕೆಲಸ ಮಾಡಿದರು. ಎನ್.ಐ.ಐ.ಟಿ.ಯಲ್ಲಿ ತಂಡದ ಹಿರಿಯ ನಾಯಕಿಯಾಗಿ, ಗುಣಮಟ್ಟ ನಿಯಂತ್ರಣ ವಿಭಾಗದ ಮುಖ್ಯಸ್ಥೆಯಾಗಿ ಅನೇಕ ರೀತಿಯ ಜವಾಬ್ದಾರಿಗಳನ್ನು ನಿರ್ವಹಿಸಿದರು. ಈ ಸಂದರ್ಭದಲ್ಲಿ ತಮ್ಮ ಕುಟುಂಬಕ್ಕಾಗಿ ಸಮಯ ನೀಡಲು ಕೆಲಸಕ್ಕೆ ರಾಜೀನಾಮೆ ನೀಡಿದರು. ಈ ಅವಧಿಯಲ್ಲಿ ಗಣಿತಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿಯನ್ನು ಮಾಡಿದ್ದಲ್ಲದೆ ಬಿಎಡ್ ಕೂಡ ಪೂರ್ತಿಗೊಳಿಸಿದರು. ಈಗ ಇವರು ಗ್ರೇಟ್ ನೋಯ್ಡಾದ ಪ್ರಮುಖ ಶಾಲೆಯೊಂದರಲ್ಲಿ ಗಣಿತ ಶಿಕ್ಷಕಿಯಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಅವರನ್ನು ಸಂಪರ್ಕಿಸಬಹುದಾದ ಇಮೇಲ್– lubnaafaque@yahoo.com